# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 16-11-2016 ರಂದು ಅಧ್ಯಕ್ಷರು, ಲೆಕ್ಕ ಪತ್ರ ಸ್ಥಾಯಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 3.00 ಗಂಟೆಗೆ ನಡೆದ ಸಭೆಯ ನಡವಳಿಗಳು**

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಮುಖ್ಯ ಅಭಿಯಂತರರು(ಬೊಮ್ಮನಹಳ್ಳಿ) |
| 2. | ಸವಿತ ವಿ.ಕೃಷ್ಣ | – ಸದಸ್ಯರು | ಮುಖ್ಯ ಅಭಿಯಂತರರು (ಯಲಹಂಕ) |
| 3. | ಎನ್.ಉಮಾ | – ಸದಸ್ಯರು | ಮುಖ್ಯ ಅಭಿಯಂತರರು (ಆರ್.ಆರ್.ನಗರ) |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | ಮುಖ್ಯ ಅಭಿಯಂತರರು (ಕೆರೆಗಳು) |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | ಮುಖ್ಯ ಅಭಿಯಂತರರು (ಯೋ-ಕೇಂದ್ರ) |
| 6. | ವಿ.ಸುರೇಶ್ | – ಸದಸ್ಯರು | ಮುಖ್ಯ ಅಭಿಯಂತರರು (ಪೂರ್ವ) |
| 7. | ಹೆಚ್.ಕುಸುಮ | – ಸದಸ್ಯರು | ಪ್ರಧಾನ ಅಭಿಯಂತರರ ತಾಂತ್ರಿಕ |
| 8. | ಎಂ.ಮಾಲತಿ | – ಸದಸ್ಯರು | ಸಹಾಯಕರು |
| 9. | ಎಂ.ಶಾಮಲ | – ಸದಸ್ಯರು | ಕಾ.ಪಾ.ಅ. (ರ.ಮೂ.ಸೌ) |
| 10. | ಕೆ.ವಿ.ರಾಜೇಂದ್ರ ಕುಮಾರ್ | – ಸದಸ್ಯರು | |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | |

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರುಗಳಿಗೆ ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ, ತಮ್ಮ ಪರಿಚಯವನ್ನು ಮಾಡಿಕೊಂಡು ನಂತರ ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಳ್ಳುವಂತೆ ಕೋರಿದರು. ಅದರಂತೆ, ಹಾಜರಿದ್ದ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಂಡರು.

ಅಧ್ಯಕ್ಷರು ಮಾತನಾಡುತ್ತಾ ಪಾಲಿಕೆಯ ವ್ಯಾಪ್ತಿಯಲ್ಲಿ ನಾನ್ ಎಸ್.ಆರ್.ರೇಟ್‌ಗಳು ಏಕರೂಪವಾಗಿ ಇಲ್ಲದೇ ಇರುವುದರಿಂದ ಹಲವಾರು ಪ್ರಕರಣದಲ್ಲಿ ಮುಖ್ಯ ಲೆಕ್ಕ ಪರಿಶೋಧಕರು ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಿದ್ದು, ಇದರಿಂದಾಗಿ ಲೆಕ್ಕಪರಿಶೋಧನಾ ಪುಸ್ತಕದಲ್ಲಿ ಹೆಚ್ಚು ಹೆಚ್ಚು ಆಕ್ಷೇಪಣೆ ಮತ್ತು ವಸೂಲಾತಿ ಇದ್ದು, ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಂದೇ ಮಾದರಿಯ ನಾನ್ ಎಸ್.ಆರ್.ರೇಟ್‌ಗಳನ್ನು ಅಳವಡಿಸಿಕೊಳ್ಳಲು ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ. ಈ ಸಂಬಂಧ ಅಧಿಕಾರಿಗಳು ತಮ್ಮ ಸಲಹೆ/ಅಭಿಪ್ರಾಯಗಳನ್ನು ಸಭೆಗೆ ನೀಡುವಂತೆ ಅಧ್ಯಕ್ಷರು ಸೂಚಿಸಿದರು.

ಮುಖ್ಯ ಅಭಿಯಂತರರು, ಯೋಜನೆ–ಕೇಂದ್ರ ರವರು ಮಾತನಾಡುತ್ತಾ ಲೋಕೋಪಯೋಗಿ ಇಲಾಖೆ ದರಪಟ್ಟಿಯಲ್ಲಿ ಕೆಲವೊಂದು ಅಂಶಗಳಿಗೆ ಎಸ್.ಆರ್.ರೇಟ್‌ಗಳನ್ನು ಅಳವಡಿಸದೇ ಇರುವುದರಿಂದ, ಪಾಲಿಕೆಯಲ್ಲಿ ಆಯಾ ವಲಯಗಳ ವ್ಯಾಪ್ತಿಯ ಅಧೀಕ್ಷಕ ಅಭಿಯಂತರರುಗಳು ಕೆಲವೊಂದು ಅಂಶಗಳಿಗೆ ವಿಭಾಗ ಕಛೇರಿಗಳಿಂದ ವಿವಿಧ ದರಗಳನ್ನು ಅಳವಡಿಸಿಕೊಂಡು ಸಲ್ಲಿಸುವ ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡುತ್ತಿದ್ದು, ಇದಕ್ಕೆ ಲೆಕ್ಕ ಪರಿಶೋಧಕರು ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಾನ್ ಎಸ್.ಆರ್.ರೇಟ್‌ಗಳಿಗೆ ಏಕರೂಪದ ದರಗಳನ್ನು ನಿಗದಿಪಡಿಸಬೇಕಾಗಿದ್ದು, ಈ ಸಂಬಂಧ ಪ್ರಧಾನ ಅಭಿಯಂತರರು ವಲಯಗಳಿಗನುಗುಣವಾಗಿ ನಾನ್ ಎಸ್.ಆರ್.ರೇಟ್‌ಗಳಿಗೆ ಐಟಂವಾರು ಏಕರೂಪದ ದರಗಳನ್ನು ನಿಗಧಿಪಡಿಸಲು ಸೂಕ್ತ ಕ್ರಮವನ್ನು ಕೈಗೊಂಡಲ್ಲಿ ಗೊಂದಲಗಳನ್ನು ನಿವಾರಿಸಬಹುದೆಂದು ಸಲಹೆ ನೀಡಿದರು.

ಅದರಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಎಸ್.ಆರ್.ದರಗಳು ಇಲ್ಲದ ಅಂಶಗಳಿಗೆ ಪಾಲಿಕೆಯ ವ್ಯಾಪ್ತಿಯಲ್ಲಿ ಒಂದೇ ದರಗಳನ್ನು ನಿಗಧಿಪಡಿಸಲು, ನಿಗಧಿಪಡಿಸಿದ ದರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲು ಪ್ರಧಾನ ಅಭಿಯಂತರರಿಗೆ ನಿರ್ದೇಶನ ನೀಡುವುದು ಸೂಕ್ತವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮುಂದುವರಿದಂತೆ ಹಾಜರಿದ್ದ ಸಮಿತಿಯ ಸದಸ್ಯರುಗಳೆಲ್ಲರೂ ಈ ಅಭಿಪ್ರಾಯಕ್ಕೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದರು.

ಅದರಂತೆ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಪಾಲಿಕೆಯ ವ್ಯಾಪ್ತಿಯಲ್ಲಿ ಒಂದೇ ಅಂಶಗಳಿಗೆ ವಿವಿಧ ದರಗಳನ್ನು ಅಳವಡಿಸಿಕೊಂಡಿರುವುದನ್ನು ಲೆಕ್ಕ ಪರಿಶೋಧನಾ ಸಮಯದಲ್ಲಿ ಗಮನಿಸಲಾಗಿದ್ದು, ನಾನ್ ಎಸ್.ಆರ್.ದರಗಳ ಅಂಶಗಳಿಗೆ ಏಕರೂಪ ದರಗಳನ್ನು ನಿಗಧಿಪಡಿಸುವ ಅವಶ್ಯಕತೆಯಿದ್ದು, ಒಂದು ಅಂಶಕ್ಕೆ ಒಂದೇ ದರವನ್ನು ವಲಯಗಳಿಗನುಗುಣವಾಗಿ ನಿಗಧಿಪಡಿಸುವುದು ಅವಶ್ಯಕವಾಗಿರುತ್ತದೆಂದು, ಈ ನಿಟ್ಟಿನಲ್ಲಿ ಪ್ರಧಾನ ಅಭಿಯಂತರರು ವಲಯವಾರು ಐಟಂ ವಿವರಗಳನ್ನು ಪಡೆದು ನಾನ್ ಎಸ್.ಆರ್.ದರಗಳನ್ನು ಒಂದೇ ಮಾದರಿಯಲ್ಲಿ ನಿಗಧಿಪಡಿಸುವುದು ಹಾಗೂ ಸದರಿ ದರಪಟ್ಟಿಗಳನ್ನು ಕಾಲಕಾಲಕ್ಕೆ ಅನುಗುಣವಾಗಿ ಪರಿಷ್ಕರಿಸಲು ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ